# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

## ಡಿಸೆಂಬರ್ ೦೬, ೨೦೨೧ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೯ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೭. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ | : ಸದಸ್ಯರು |
| ೦೮. ಡಾ. ಓ. ಓಬಯ್ಯ, ಬೆಂಗಳೂರು | : ಸದಸ್ಯರು |
| ೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೧೦. ಡಾ. ವೀರೇಶ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಸಿ.ಎಸ್. ವಾಸುದೇವನ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೪. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೫. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ಇತ್ತೀಚೆಗೆ ನಿಧನರಾದ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಡೀನರಾಗಿದ್ದ ಡಾ. ಸಿ.ಆರ್.ಗೋವಿಂದರಾಜು, ನಾಡೋಜ ಶ್ರೀಮತಿ ಹರಿಜನ ಪದ್ಮಮ್ಮ, ಕೊಟ್ಟೂರುಸ್ವಾಮಿ ಮಠದ ಡಾ. ಸಂಗನಬಸವ ಮಹಾಸ್ವಾಮಿಗಳು, ಚಿತ್ರನಟರಾದ ಶ್ರೀ ಪುನೀತ್ ರಾಜಕುಮಾರ್, ಹಿರಿಯ ನಟರಾದ ಶ್ರೀ ಶಿವರಾಂ ಅವರುಗಳ ಆತ್ಮಕ್ಕೆ ಶಾಂತಿ ಕೋರಿ ಸಭೆ ಸಂತಾಪ ಸೂಚಿಸಿತು. ಹಾಗೂ ಸಮಾಜ ವಿಜ್ಞಾನಗಳ ನಿಕಾಯದ ನೂತನ ಡೀನರಾಗಿ ನಿಯೋಜನೆಗೊಂಡ ಡಾ.ಸಿ.ಎಸ್. ವಾಸುದೇವನ್ ಅವರನ್ನು ಸ್ವಾಗತಿಸಿ ಸಭೆಗೆ ಪರಿಚಯಿಸಲಾಯಿತು.

**ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ** : ದಿನಾಂಕ ೨೦.೦೯.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**(ಅನುಬಂಧ-೦೧)**

**ನಿರ್ಣಯ** : ದಿನಾಂಕ ೨೦.೦೯.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿ ೨೧೮ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ದಿ.೩.೯.೨೦೨೧ರಂದು ನಡೆದ ಖರೀದಿ ಸಮಿತಿ ಸಭೆಯ ನಡೆವಳಿಯನ್ನು ಖರೀದಿಸಲಾದ ವಸ್ತುಗಳ ಭೌತಿಕ ಪರಿಶೀಲನೆ ನಂತರ ಸ್ಥಿರೀಕರಿಸುವುದೆಂದು ಸೂಚಿಸಿ ಸ್ಥಿರೀಕರಣಕ್ಕೆ ಸಭೆಯು ಅನುಮೋದನೆ ನೀಡಿತು.

೨೧೮.೧೫ರ ವಿಷಯ ३೭೧(ಜೆ) ಬೋಧಕ ಸಿಬ್ಬಂದಿ ನೇಮಕಾತಿ ಸಂಬಂಧಿಸಿದ ನಡೆವಳಿಗಳ ಕುರಿತು ಸಭೆಯು ಚರ್ಚಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಸ್ಪಷ್ಟೀಕರಣ ಬಂದ ನಂತರ ಅದರ ಸೂಚನೆಯಂತೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ನಿಯಮಾನುಸಾರ ಕ್ರಮವಹಿಸಲು ಸಭೆ ತೀರ್ಮಾನಿಸಿತು.

**ವಿಷಯ** : ದಿನಾಂಕ ೨೦.೦೯.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗಳಿಗೆ ಅನುಮೋದನೆ ನೀಡುವ ಕುರಿತು.**(ಅನುಬಂಧ-೦೨)**

**ನಿರ್ಣಯ** : ದಿನಾಂಕ ೨೦.೦೯.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಸಭೆಯ ಪರಿಶೀಲಿಸಿ ಅನುಮೋದನೆ ನೀಡಿತು.

೨೯.೦೧ ಕನ್ನಡ ವಿಶ್ವವಿದ್ಯಾಲಯದ ೩೦ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಅಂತಿಮಗೊಳಿಸಿ, ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸುವ ಕುರಿತು.

ನಿರ್ಣಯ : ೩೦ನೇ ನುಡಿಹಬ್ಬದ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ತೀರ್ಮಾನಿಸಿತು.

೨೯.೦೨ ಅಕ್ಟೋಬರ್ ೦೭, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಪಿಎಚ್.ಡಿ. ಪ್ರವೇಶ ಕುರಿತು ಸಭೆಯು ಚರ್ಚಿಸಿ ಪ್ರವೇಶ ಪ್ರಕ್ರಿಯೆಯನ್ನು ಆರಂಭಿಸಲು ಸಭೆ ತೀರ್ಮಾನಿಸಿತು.

೨೯.೦೩ ದಿನಾಂಕ ೩೦.೦೯.೨೦೨೧ರಂದು ನಡೆದ ೨೦೨೦-೨೧ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೯.೦೪ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿ.ಐ.ಪಿ-೨ ವಸತಿಗೃಹವನ್ನು ೫ ವರ್ಷಗಳ ಅವಧಿಯವರೆಗೆ ಪೊಲೀಸ್ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

ನಿರ್ಣಯ : ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿಐಪಿ-೨ ವಸತಿಗೃಹವನ್ನು ೨ ವರ್ಷಗಳ ಅವಧಿಯವರೆಗೆ (ವಿವಿಗೆ ಅಗತ್ಯವಿದ್ದ ಸಂದರ್ಭದಲ್ಲಿ ಬಿಟ್ಟುಕೊಡುವ ಷರತ್ತಿನೊಂದಿಗೆ) ಪೊಲೀಸ್ ಇಲಾಖೆಗೆ ನೀಡಲು ಸಭೆ ಅನುಮೋದನೆ ನೀಡಿತು.

೨೯.೦೫ ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘ (ರಿ) ಮತ್ತು ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಸಂಘ (ರಿ)ದವರು ದಿನಾಂಕ ೧೭.೧೧.೨೦೨೧ರಂದು ನೀಡಿರುವ ಪತ್ರ ಮತ್ತು ಅದಕ್ಕೆ ವಿಶ್ವವಿದ್ಯಾಲಯ ನೀಡಿದ ಹಿಂಬರಹ ಕುರಿತು.

ನಿರ್ಣಯ : ಸದರಿ ವಿಷಯಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಂಡಿತು.

೧. ೩೭೧(ಜೆ) ಅಡಿಯ ಬೋಧಕ ಹುದ್ದೆಗಳ ನೇಮಕಾತಿ ಕುರಿತು ಸಲ್ಲಿಸಿರುವ ಪ್ರಸ್ತಾವನೆಗೆ ಸಮಾಜ ಕಲ್ಯಾಣ ಇಲಾಖೆ ನೀಡುವ ಸ್ಪಷ್ಟೀಕರಣ ಆಧರಿಸಿ, ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಕ್ರಮವಹಿಸಲು ಸಭೆ ತೀರ್ಮಾನಿಸಿತು.

೨. ಸರ್ಕಾರದಿಂದ ತುರ್ತಾಗಿ ವೇತನ ಅನುದಾನ ಬಿಡುಗಡೆಗೊಳಿಸಲು ಸೂಕ್ತ ಕ್ರಮವಹಿಸುವುದು ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾದ ತಕ್ಷಣವೇ ವೇತನ ಪಾವತಿಗೆ ಕ್ರಮವಹಿಸುವುದು.

೩. ನಿವೃತ್ತ ನೌಕರರಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಉಪಲಬ್ಧಿಗಳ ಸೌಲಭ್ಯವನ್ನು ನೀಡಲು ಸಭೆ ತೀರ್ಮಾನಿಸಿತು.

೪. ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಬೇಡಿಕೆ ಹಿನ್ನೆಲೆಯಲ್ಲಿ ಒಂದು ತಿಂಗಳ ವೇತನ ಪಾವತಿಗೆ ಕ್ರಮವಹಿಸಲು ಸಭೆ ನಿರ್ಣಯಿಸಿತು.

೫. ಸೇವಾಪೂರ್ವಾವಧಿ ಘೋಷಣೆಗೆ ಸಂಬಂಧಪಟ್ಟ ದೂರನ್ನು ಆಲಿಸಲಾಗಿ, ಈ ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಸದರಿ ವಿಷಯದ ಚರ್ಚೆಯನ್ನು ಕೈಬಿಡಲು ಸಭೆ ನಿರ್ಣಯಿಸಿತು.

೬. ಡಾ.ಎಂ. ಮಲ್ಲಿಕಾರ್ಜುನಗೌಡ ಅವರ ಸಿ.ಎ.ಎಸ್. ಬಡ್ತಿ ಸಂಬಂಧದ ವಿವರಣೆಗಳನ್ನು ಭಾಷಾ ನಿಕಾಯದ ಡೀನ್ ಅವರು ಸಭೆಗೆ ಮಂಡಿಸಿದರು. ದಿನಾಂಕ ೧೬.೧೧.೨೦೨೧ರಂದು ಆಯೋಜಿಸಿರುವ ಸಿ.ಎ.ಎಸ್. ಪರಿಶೀಲನಾ ಸಮಿತಿಯು ನೀಡುವ ಅಂತಿಮ ವರದಿಯ ಹಿನ್ನೆಲೆಯಂತೆ ಕ್ರಮವಹಿಸುವುದಕ್ಕೆ ಹಾಗೂ ಈ ಕುರಿತು ಇಲಾಖಾ ತನಿಖೆಯನ್ನು ನಡೆಸುವುದಕ್ಕೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ಸಭೆ ತೀರ್ಮಾನಿಸಿತು.

   ೧. ಶ್ರೀ ಜೈಭೀಮ್ ಆರ್. ಕಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು, ಕವಿಹಂ
   ೨. ಡಾ. ಕೆ.ಎಂ. ಮೇತ್ರಿ, ಪ್ರಾಧ್ಯಾಪಕರು, ಕವಿಹಂ
   ೩. ಶ್ರೀ ಯು.ಬಿ.ಉಳವಿ, ಕರ್ನಾಟಕ ಸರ್ಕಾರದ ನಿವೃತ್ತ ಉಪಕಾರ್ಯದರ್ಶಿಯವರು
   ೪. ಉಪಕುಲಸಚಿವರು (ಆಡಳಿತ)ಕವಿಹಂ ಸದಸ್ಯ ಸಂಚಾಲಕರು

೭. ಅನುಕಂಪ ಆಧಾರಿತ ನೇಮಕಾತಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಶೀಘ್ರವಾಗಿ ಅನುಮತಿ ಪಡೆಯಲು ಮತ್ತು ಅನುಮತಿ ದೊರೆತ ಕೂಡಲೇ ನೇಮಕಾತಿ ಮಾಡಿಕೊಳ್ಳುವುದು. ಅರ್ಹ ಅಭ್ಯರ್ಥಿಗಳು ಇಚ್ಛಿಸಿದಲ್ಲಿ ಸದ್ಯಕ್ಕೆ ತಾತ್ಕಾಲಿಕ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳಲು ಸಭೆ ನಿರ್ಣಯಿಸಿತು.

೮. ೨೦೨೧-೨೨ನೇ ಸಾಲಿನ ಎಸ್‌ಸಿಎಸ್‌ಪಿ/ಟಿಎಸ್‌ಪಿಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದಿಂದ ಎಸ್‌ಸಿಎಸ್‌ಪಿ ಅಡಿಯಲ್ಲಿ ರೂ.೮.೨೫ ಲಕ್ಷ ಹಾಗೂ ಟಿಎಸ್‌ಪಿ ಅಡಿಯಲ್ಲಿ ರೂ.೪.೨೫ ಲಕ್ಷ ಹಣ ಬಿಡುಗಡೆಯಾಗಿದ್ದು ಸದರಿ ಮೊತ್ತವನ್ನು ನಿಯಮಾನುಸಾರ ಅರ್ಹ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲು ಸಭೆ ತೀರ್ಮಾನಿಸಿತು.

೯. ವಿಶ್ವವಿದ್ಯಾಲಯದ ಬ್ಯಾಂಕ್‌ಗಳಲ್ಲಿರುವ ಠೇವಣಿ ಮತ್ತು ಆರ್ಥಿಕ ಸ್ಥಿತಿಗತಿಗಳ ಮಾಹಿತಿಯನ್ನು ಸದಸ್ಯರಿಗೆ ನೀಡಲು ಸಭೆ ಸೂಚಿಸಿತು.

೨೦೯.೦೬ ದಿನಾಂಕ೧೨.೧೧.೨೦೨೧ರಿಂದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳಿಗೆ ವಿಶ್ವವಿದ್ಯಾಲಯವು ಸಿದ್ಧಪಡಿಸಿದ ವಾಸ್ತವಾಂಶಗಳ ವರದಿ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಬಗೆಗೆ ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳಿಗೆ ಸ್ಪಷ್ಟನೆ ನೀಡಲಾದ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೨೦೯.೦೭ ಸ್ನಾತಕೋತ್ತರ ಪದವಿಗಳು-೦೭, ಸ್ನಾತಕೋತ್ತರ ಡಿಪ್ಲೊಮಾಗಳು-೧೨, ಡಿಪ್ಲೊಮಾ-೧ ಮತ್ತು ಸರ್ಟಿಫಿಕೇಟ್ ಕೋರ್ಸ್-೧ ಮತ್ತು ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಯೋಗ ಅಧ್ಯಯನ ವಿಭಾಗಗಳ ಅನುಶಾಸನಗಳ ಪರಿಷ್ಕರಣ ಸಮಿತಿಯ ವರದಿ ಕುರಿತು.

ಟಿಪ್ಪಣಿ : ಈ ಹಿಂದೆ ನಡೆದ ಕಾರ್ಯಕಾರಿ ಸಮಿತಿ ಸಭೆಗಳು ೧೮೯.೦೯ ದಿನಾಂಕ ೦೬.೦೯.೨೦೧೭, ೨೦೦.೨೦, ೨೦೦.೨೧ ದಿನಾಂಕ ೦೬.೦೬.೨೦೧೯, ೨೦೩.೦೩, ದಿನಾಂಕ ೧೯.೦೩.೨೦೨೦, ೨೦೪.೦೧, ೨೦೪.೦೨, ೨೦೪.೦೩, ೨೦೪.೨೪ ದಿನಾಂಕ ೦೯.೧೦.೨೦೨೦ರ ಅನುಮೋದನೆಯಂತೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ದಿನಾಂಕ ೦೩.೦೨.೨೦೨೧ ರಲ್ಲಿ ಅನುಶಾಸನಗಳನ್ನು ಕುಲಾಧಿಪತಿಗಳ ಅನುಮೋದನೆ ಕೋರಿ ಸಲ್ಲಿಸಲಾಗಿತ್ತು. ಉನ್ನತ ಶಿಕ್ಷಣ ಇಲಾಖೆಯು ಸದರಿ ಅನುಶಾಸನಗಳನ್ನು ಪರಿಶೀಲಿಸಿ ಕೆಲವು ಸ್ಪಷ್ಟನೆಗಳನ್ನು ಕೋರಿರುತ್ತದೆ. ಅದರಂತೆ ವಿಶ್ವವಿದ್ಯಾಲಯದ ಅನುಶಾಸನ ಪರಿಷ್ಕರಣಾ ಸಮಿತಿಯು ಎಲ್ಲ ನ್ಯೂನ್ಯತೆಗಳನ್ನು ಸರಿಪಡಿಸಿದೆ. ಹಾಗೆಯೇ ಕಾರ್ಯಕಾರಿ ಸಮಿತಿ ಸಭೆಯು ೨೦೬.೧೪ ದಿನಾಂಕ ೦೬.೦೨.೨೦೨೧ರಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರದರ್ಶಕ ಕಲೆ-ಸಂಗೀತ (ಕರ್ನಾಟಕ ಸಂಗೀತ) ಮತ್ತು ಪ್ರದರ್ಶಕ ಕಲೆ-ನೃತ್ಯ (ಭರತನಾಟ್ಯ) ಸ್ನಾತಕೋತ್ತರ ಪದವಿಗಳನ್ನು ಆರಂಭಿಸಲು ಅನುಮೋದನೆ ನೀಡಿದೆ. ಆದ್ದರಿಂದ ಈ ಮೇಲಿನ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ವಿಭಾಗಗಳ ಅನುಶಾಸನಗಳನ್ನು ಮರುಪರಿಷ್ಕರಿಸಿ ಸಿದ್ಧಪಡಿಸಿದ್ದು, ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಮೇಲೆ ವಿವರಿಸಲಾದ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳ ಮತ್ತು ಅಧ್ಯಯನ ವಿಭಾಗಗಳ ಪರಿಷ್ಕರಿಸಿ ಮಂಡಿಸಲಾದ ಅನುಶಾಸನಗಳನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಪ್ಪಿಗೆ ನೀಡಿತು.

೨೦೯.೦೮ ಶ್ರೀ ಕೆ ಪ್ರಹ್ಲಾದಾಚಾರಿ ಮತ್ತು ಇತರರ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ಧಾರವಾಡ ಪೀಠವು ದಿ.೩೦.೮.೨೦೨೧ರಂದು ನೀಡಿದ ತೀರ್ಪಿನ ಕುರಿತು.

ಟಿಪ್ಪಣಿ : ಶ್ರೀ ಕೆ ಪ್ರಹ್ಲಾದಾಚಾರಿ ಮತ್ತಿತರರು ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ಧಾರವಾಡ ಪೀಠವು ತನ್ನ ೩೦.೦೮.೨೦೨೧ರ ತೀರ್ಪಿನಲ್ಲಿ, ಈ ಹಿಂದೆ ೧೪.೦೮.೨೦೧೫ರಂದು ನೀಡಿದ್ದ ತೀರ್ಪಿನನ್ವಯ ಸದರಿಯವರ ಮನವಿಗಳಲ್ಲಿರುವಂತೆ ೧೩.೦೬.೨೦೦೩ರಿಂದ ಪೂರ್ವಾನ್ವಯವಾಗುವಂತೆ ಬಡ್ತಿ ಹೊಂದಲು ಅರ್ಹರೇ ಎಂಬ ವಿಷಯದಲ್ಲಿ ಪರಿಶೀಲಿಸಿ ಸೂಕ್ತ ಆದೇಶವನ್ನು ಹೊರಡಿಸಲು ಆದೇಶಿಸಿರುತ್ತದೆ. ಈ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಕ್ರಮವಹಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಅಂಶವನ್ನು ಸಭೆಯು ಪರಿಶೀಲಿಸಿ ಈ ಸಂಬಂಧ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆದು ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು.

೨೦೯.೦೯ ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿರುವ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಾದೇಶಿಕ ಕೇಂದ್ರದಲ್ಲಿ ನೂತನವಾಗಿ ಕಟ್ಟಡಗಳ ನಿರ್ಮಿಸುವ ಕುರಿತು.

ಟಿಪ್ಪಣಿ : ಬಾದಾಮಿಯ ನಾಗರಾಳ ಎಸ್.ಬಿ. ಗ್ರಾಮದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ೩.೩೧ಎಕರೆ ಜಮೀನನ್ನು ಕರ್ನಾಟಕ ಸರ್ಕಾರವು ಮಂಜೂರು ಮಾಡಿದೆ. ಸದರಿ ಜಮೀನಿನಲ್ಲಿ ಶಿಲ್ಪ ಮತ್ತು ವರ್ಣಚಿತ್ರಗಳ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದಂತೆ ಕಟ್ಟಡಗಳನ್ನು ನಿರ್ಮಿಸುವ ಅಂದಾಜು ವೆಚ್ಚಗಳ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೦೯.೧೦ ನ್ಯಾಕ್ ಸಂಬಂಧಿಸಿದ ದಾಖಲೆ ಮತ್ತು ಕ್ರೈಟೇರಿಯಾವಾರು ಮಾಹಿತಿಗಳ ಸಲ್ಲಿಕೆ ಕುರಿತು.

ನಿರ್ಣಯ : ೨೦೨೦-೨೧ನೇ ಸಾಲಿನ ನ್ಯಾಕ್ ಸಂಬಂಧಿಸಿದ ವರದಿಗಳನ್ನು ಕೆಲವು ವಿಭಾಗಗಳು ನೀಡದಿರುವುದನ್ನು ಸಭೆ ಗಂಭೀರವಾಗಿ ಪರಿಗಣಿಸಿ, ಕ್ರೈಟೇರಿಯಾವಾರು ಸಮಿತಿ ಕೈಗೊಂಡಿರುವ ಕೆಲಸ ಕಾರ್ಯಗಳ ವರದಿ, ಮೌಲ್ಯಮಾಪನ ವರದಿಗಳನ್ನು

ಪಡೆಯಲು ಕ್ರಮವಹಿಸುವುದು. ಸದರಿ ವರದಿಗಳನ್ನು ಒಂದು ವಾರದೊಳಗಾಗಿ ನೀಡದಿದ್ದಲ್ಲಿ ಸಂಬಂಧಿಸಿದವರಿಗೆ ನೋಟೀಸ್ ನೀಡುವ ಮೂಲಕ ಶಿಸ್ತುಕ್ರಮ ಜರುಗಿಸಲು ಸಭೆ ತೀರ್ಮಾನಿಸಿತು.

**೨೦೯.೧೧** ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ಪತ್ರಿಕಾ ಮಾಧ್ಯಮದ ಮೂಲಕ ವಿಶ್ವವಿದ್ಯಾಲಯದ ಆಡಳಿತಾಂಗದ ವಿರುದ್ಧ ಕೇಳಿ ಬಂದ ಹಲವು ಬಗೆಯ ಆರೋಪ ಮತ್ತು ದೂರುಗಳ ಕುರಿತು.

**ನಿರ್ಣಯ :** ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ಪತ್ರಿಕಾ ಮಾಧ್ಯಮದ ಮೂಲಕ ವಿಶ್ವವಿದ್ಯಾಲಯದ ಆಡಳಿತಾಂಗದ ವಿರುದ್ಧ ಕೇಳಿ ಬಂದ ಹಲವು ಬಗೆಯ ಆರೋಪ ಮತ್ತು ದೂರುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಆ ಬಗಗೆ ಸೂಕ್ತ ಕ್ರಮವನ್ನು ಜರುಗಿಸುವ ಹಿನ್ನೆಲೆಯಲ್ಲಿ ಈ ಕೆಳಕಂಡ ಸಂಗತಿಗಳ ಕುರಿತಂತೆ ರಾಜ್ಯ ಹೈಕೋರ್ಟಿನ ಮಾನ್ಯ ನಿವೃತ್ತ ನ್ಯಾಯಾಧೀಶರ ಏಕ ಸದಸ್ಯ ತನಿಖಾ ಸಮಿತಿಯನ್ನು ನೇಮಿಸಿ ಮೂರು ತಿಂಗಳ ಒಳಗೆ ವರದಿ ಪಡೆಯಲು ಸಭೆ ಅನುಮೋದನೆ ನೀಡಿತು.

**ನಿವೃತ್ತ ನ್ಯಾಯಾಧೀಶರ ನೇತೃತ್ವದ ತನಿಖೆಗೆ ಒಳಪಡುವ ಅಂಶಗಳು**

೧. ೨೦೧೭ರ ಅಧಿಸೂಚನೆಯಡಿ ನೇಮಕಗೊಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಸಂಬಂಧಿಸಿದ ಆರೋಪಗಳು
೨. ಸೆಪ್ಟಂಬರ್ ೨೦೨೧ರಲ್ಲಿ ಅಧಿಸೂಚನೆ ಹೊರಡಿಸಿ, ನೇಮಕಾತಿ ಬಾಕಿ ಇರುವ ಬೋಧಕ ಹುದ್ದೆಗಳಿಗೆ ಸಂಬಂಧಿಸಿದ ಆರೋಪಗಳು
೩. ತಾತ್ಕಾಲಿಕ ಸಿಬ್ಬಂದಿಯ ಮಾಸಿಕ ವೇತನಕ್ಕೆ ಸಂಬಂಧಿಸಿದ ಆರೋಪಗಳು
೪. ನಿವೃತ್ತ ನೌಕರರ ಪಿಂಚಣಿ ಉಪದಾನ ಬಿಡುಗಡೆ ಸಂಬಂಧಿಸಿದ ಆರೋಪಗಳು
೫. ಸಂಶೋಧನಾ ವಿದ್ಯಾರ್ಥಿಗಳ ಪಿಎಚ್.ಡಿ. ಕಲೋಕ್ವಿಯಂ ಸಂಬಂಧಿಸಿದ ಆರೋಪಗಳು
೬. ಸಹ ಪ್ರಾಧ್ಯಾಪಕರಾದ ಡಾ.ಎಂ. ಮಲ್ಲಿಕಾರ್ಜುನಗೌಡ ಇವರ ಸಿ.ಎ.ಎಸ್. ಬಡ್ತಿಗೆ ಸಂಬಂಧಿಸಿದ ಆರೋಪಗಳು
೭. ೨೦೧೧ ರಿಂದ ೨೦೨೧ರ ಅವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ವಂಚಿಸಿದ ಮತ್ತು ಇತರೆ ಸಾಬೀತಾದ ಪ್ರಕರಣಗಳು.
೮. ೨೦೧೭ರ ಅಧಿಸೂಚನೆಯಡಿ ನೇಮಕಗೊಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ, ಮೀಸಲಾತಿ ನಿಗದಿ, ಅಭ್ಯರ್ಥಿಗಳ ಅರ್ಹತೆಗಳು, ಅನುಸರಿಸಿದ ಮಾನದಂಡಗಳು.
೯. ಡಾ. ಸಂಪತ್ ಕುಮಾರ್ ತೆಗ್ಗಿ ಮತ್ತು ಶ್ರೀ ಶಂಕರಗೌಡ ಗುಂಡಕನಾಳ ಇವರ ಆರೋಪಗಳು.
೧೦. ಮೇಲಿನ ಅಂಶಗಳ ತನಿಖೆಯ ಸಮಯದಲ್ಲಿ ಸಂಪರ್ಕಗೊಳ್ಳುವ ಇತರೆ ವಿಷಯಗಳು.

**೨೦೯.೧೨** ಕಾರ್ಯಕಾರಿ ಸಮಿತಿ ಸದಸ್ಯರು ಬೋಧಕ ಸಿಬ್ಬಂದಿಗಳ ಶೈಕ್ಷಣಿಕ ಪ್ರಗತಿ ಹಾಗೂ ಆಡಳಿತ ಸಿಬ್ಬಂದಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ವಿಭಾಗಗಳ ಭೇಟಿ ನೀಡುವ ಕುರಿತು.

**ನಿರ್ಣಯ :** ನಿಕಾಯವಾರು ವಿಭಾಗಗಳ ಅಧ್ಯಾಪಕರ ೨೦೧೫ರಿಂದ ಈವರೆಗಿನ (ನವೆಂಬರ್–೨೦೨೧)ಅವಧಿಯ ಯೋಜನೆ ಹಾಗೂ ಶೈಕ್ಷಣಿಕ ಪ್ರಗತಿಗಳನ್ನು ಸಮಿತಿಯು ವಿವರವಾಗಿ ಪರಿಶೀಲಿಸಿ ಮುಂದಿನ ಸಭೆಗೆ ವರದಿ ನೀಡಲು, ಅದೇ ರೀತಿ ಆಡಳಿತ ಸಿಬ್ಬಂದಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಎಲ್ಲ ವಿಭಾಗಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯರು ಭೇಟಿ ನೀಡಲು ಸಭೆ ತೀರ್ಮಾನಿಸಿತು. ಇದೇ ಸಂದರ್ಭದಲ್ಲಿ ದಿ.೩.೯.೨೦೨೧ರಂದು ನಡೆದ ಖರೀದಿ ಸಮಿತಿ ಸಭೆ ನಡವಳಿಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಭೌತಿಕವಾಗಿ ಪರಿಶೀಲಿಸುವುದೆಂದು ತೀರ್ಮಾನಿಸಲಾಯಿತು.

**೨೦೯.೧೩** ವಿಸ್ತರಣಾ ಕೇಂದ್ರಗಳ ಮುಖ್ಯಸ್ಥರ/ನಿರ್ದೇಶಕರ ನಿಯೋಜನೆ ಕುರಿತು.

**ನಿರ್ಣಯ :** ವಿಸ್ತರಣಾ ಕೇಂದ್ರಗಳಿಗೆ ಮುಖ್ಯಸ್ಥರು/ನಿರ್ದೇಶಕರಾಗಿ ನಿಯೋಜನೆಗೊಂಡು ಮೂರು ವರ್ಷಗಳ ಅವಧಿ ಪೂರ್ಣಗೊಳಿಸಿದ ಅಧ್ಯಾಪಕರನ್ನು ವರ್ಗಾಯಿಸಿ ಬೇರೆ ಅಧ್ಯಾಪಕರನ್ನು ನಿಯೋಜಿಸುವ ಸಂಬಂಧ ಡೀನ್ ಸಮಿತಿ ಸಭೆಯಲ್ಲಿ ಮಂಡಿಸಿ ಅಂತಿಮಗೊಳಿಸಲು ಸಭೆ ತೀರ್ಮಾನಿಸಿತು.

**೨೦೯.೧೪** ವಿಶ್ವವಿದ್ಯಾಲಯದಲ್ಲಿ ಪ್ರವಾಸಿ ಕೇಂದ್ರವನ್ನು ಆರಂಭಿಸುವ ಕುರಿತು.

**ನಿರ್ಣಯ :** ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಪ್ರವಾಸಿ ಕೇಂದ್ರವನ್ನು ಪ್ರಾರಂಭಿಸಲು ಉದ್ದೇಶಿಸಲಾದ ಪ್ರಸ್ತಾವನೆಯನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಕ್ರಮವಹಿಸಲು ಸಭೆಯು ತೀರ್ಮಾನಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು